(ಇಂದು ದಿನಾಂಕ 12-04-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು ಃ ಪ್ರತಿವಾದಿ ಪರ ಶ್ರೀ ಬಿ.ಎಸ್.ಯು. ವಕೀಲರಿಂದ**

**1.** ನನ್ನ ತಂದೆಯ ಮನೆ ಮೂಡಂಗಿ ಗ್ರಾಮದಲ್ಲಿ ಇರುತ್ತದೆ. ನನ್ನ ತಂದೆಗೆ ನಾನೊಬ್ಬಳೆ ಮಗಳು ಇರುತ್ತೇನೆ. ನನ್ನ ಗಂಡನ ಮನೆ ಕೂಡ ಮೂಡಂಗಿ ಗ್ರಾಮದಲ್ಲಿ ಇದೆ. ನನ್ನ ಗಂಡನಿಗೆ 5 ಜನ ಸಹೋದರರು ಇರುತ್ತಾರೆ. ನನ್ನ ಗಂಡ ಸುಮಾರು 20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ. ನನ್ನ ಮದುವೆಯ ನಂತರ ನನ್ನ ಗಂಡನ ಮನೆಯಲ್ಲಿ ವಾಸವಿದ್ದೆನು. ಸಾಕ್ಷಿ ಮುಂದುವರೆದು ನನ್ನ ಗಂಡನ ಮರಣಾನಂತರ ನನ್ನನ್ನು ಸಾಕುತ್ತಿದ್ದ ಅನಂತ ಗಣಪಯ್ಯ ಹರಿಕಂತ್ರ ಇವರ ಮನೆಯಲ್ಲಿ ವಾಸವಿದ್ದೆನು ಎಂದು ನುಡಿಯುತ್ತಾರೆ. ಸದ್ರಿ ಅನಂತ ಹರಿಕಂತ್ರ ಇವರು ನನ್ನನ್ನು ದತ್ತಕಕ್ಕೆ ಪಡೆದುಕೊಂಡಿಲ್ಲ, ಆದರೆ ಸಾಕಿ ಮದುವೆ ಮಾಡಿರುತ್ತಾರೆ. ನನ್ನ ಮದುವೆಯ ಸಮಯ ನನ್ನ ಜನಕ ತಂದೆ-ತಾಯಿ ಮೃತಪಟ್ಟಿದ್ದರು. ಅನಂತ ಹರಿಕಂತ್ರ ಇವರು ಕುಟುಂಬ ಪಡಿತರ ಚೀಟಿಯಲ್ಲಿ ನನ್ನ ಹೆಸರು ಯಾವತ್ತೂ ಇರಲಿಲ್ಲ, ಅವರೊಬ್ಬರ ಹೆಸರು ಮಾತ್ರ ಇತ್ತು, ನನ್ನ ಮತ್ತು ನನ್ನ ಮಕ್ಕಳ ಪಡಿತರ ಚೀಟಿ ಮೂಡಂಗಿಯ ದಾವಾ ಮನೆಯ ವಿಳಾಸದಲ್ಲಿ ಇರುತ್ತದೆ. ನನ್ನ ಮನೆಯ ನಂಬರ್ 703 ಇರುತ್ತದೆ. ವಾರ್ಡ ನಂಬರ್ ಗೊತ್ತಿಲ್ಲ, ಅನಂತ ಹರಿಕಂತ್ರ ಇವರು ನಾವು ವಾಸವಾಗಿರುವ ಮನೆಯಲ್ಲೇ ವಾಸವಾಗಿದ್ದರು. ಒಂದೇ ಮನೆಗೆ ಎರಡು ಪಡಿತರ ಚೀಟಿ ಇರುತ್ತದೆ.

**2.** ಅನಂತ ಹರಿಕಂತ್ರರಿಗೆ ನಾನು ಔಷದೋಪಚಾರ ಕೊಟ್ಟ ಬಗ್ಗೆ ನನ್ನ ಬಳಿ ದಾಖಲೆಗಳು ಇಲ್ಲ, ದಾವಾ ಆಸ್ತಿ ಸದ್ರಿ ಅನಂತ ಹರಿಕಂತ್ರ ಇವರಿಗೆ ಹೇಗೆ ಲಭಿಸಿತು ಎಂದು ನನಗೆ ಗೊತ್ತಿಲ್ಲ, ದಾವಾ ಆಸ್ತಿ ಸರ್ವೆ ನಂಬರ್ ನನಗೆ ನೆನಪಿಲ್ಲ, ಚತುರ್ಗಡಿ ಹೇಳಲು ಬರುತ್ತದೆ. ಸಾಕ್ಷಿ ಮುಂದುವರೆದು ದಿಕ್ಕುಗಳನ್ನು ಮತ್ತು ಚತುರ್ಗಡಿ ಹೇಳಲು ಬರುವುದಿಲ್ಲ ಎಂದು

ನುಡಿಯುತ್ತಾರೆ. ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣಪತ್ರ ತಯಾರಿಸಲು ವಕೀಲರಿಗೆ ನನ್ನ ಮಗ ಮಂಜುನಾಥ ಮಾಹಿತಿ ನೀಡಿರುತ್ತಾನೆ. ದಾವಾ ಆಸ್ತಿಯ ಉಳಿದ 0-5-0 ಕ್ಷೇತ್ರ ನ್ಯಾಯಾಲಯದ ಆದೇಶದ ಪ್ರಕಾರ ಪ್ರತಿವಾದಿಯ ಹೆಸರಿಗೆ ಇದೆ ಎಂದರೆ ಸಾಕ್ಷಿ ನನ್ನ ಮಾವ ಜೀವಂತವಿದ್ದಾಗ 0-3-0 ಕ್ಷೇತ್ರವನ್ನು ನನ್ನ ಮಗ ಮಂಜುನಾಥನ ಹೆಸರಿಗೆ ಬರೆದುಕೊಟ್ಟಿದ್ದರು. ಉಳಿದ 0-2-0 ದಾರಿ ಕ್ಷೇತ್ರದ ಬಗ್ಗೆ ನಾನು ದಾವೆ ಸಲ್ಲಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ಮಾವ 0-3-0 ಕ್ಷೇತ್ರವನ್ನು ದತ್ತಕ ಎಂದು ನನ್ನ ಮಗನ ಪರವಾಗಿ ಬರೆದುಕೊಟ್ಟಿರುತ್ತಾರೆ. ನನ್ನ ಮಾವ ಅನಂತ ಹರಿಕಂತ್ರ ನನ್ನ ಹೆಸರಿಗೆ ಯಾವುದೇ ಆಸ್ತಿಯನ್ನು ಬರೆದುಕೊಟ್ಟಿಲ್ಲ. ಈ ದಾವೆಯಲ್ಲಿನ ಮೃತ್ಯುಪತ್ರ ದಿನಾಂಕ 21-04-1989 ನ್ನು ನನ್ನ ಮಾವ ಅನಂತ ಹರಿಕಂತ್ರ ಇವರು ನನ್ನ ಮಗ ಮಂಜುನಾಥನ ಹೆಸರಿಗೆ ಬರೆದುಕೊಟ್ಟಿರುತ್ತಾರೆ.

**3.** ನಾನು 2ನೇ ತರಗತಿತನಕ ವಿದ್ಯಾಭ್ಯಾಸ ಮಾಡಿರುತ್ತೇನೆ. ಈ ದಾವೆಯಲ್ಲಿನ ಮೃತ್ಯುಪತ್ರ ದಿನಾಂಕ 21-04-1989 ನ್ನು ನಾನು ವಕೀಲರ ಮೂಲಕ ಓದಿಸಿ ನೋಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನ್ನ ವಕೀಲರು ನನಗೆ ತಿಳಿಸಿದ್ದಾರೆ. ಸದ್ರಿ ದಾಖಲೆಗೆ ಧ್ಯಾಯಪ್ಪ ಹರಿಕಂತ್ರ, ಗೇಲಪ್ಪ ಹರಿಕಂತ್ರ ಇವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಠಾಕರ್ಸಿ ವಕೀಲರು ದಸ್ತೂರ ಮಾಡಿರುತ್ತಾರೆ. ಸದ್ರಿ ದಾಖಲೆಗೆ ಅನಂತ ಹರಿಕಂತ್ರ ಎಷ್ಟು ಸಹಿ ಮಾಡಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸದ್ರಿ ಮೃತ್ಯುಪತ್ರ ದಾಖಲೆ ನನ್ನ ಮನೆಯಲ್ಲಿ ಇತ್ತು.

**4.** ಅನಂತ ಹರಿಕಂತ್ರ ಇವರಿಗೆ ಪ್ರತಿವಾದಿಯ ಪರವಾಗಿ ದಿನಾಂಕ 26-08-1995 ರಂದು ನೋಂದಾಯಿತ ಮೃತ್ಯುಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದ್ರಿ ಮೃತ್ಯುಪತ್ರದ ಪ್ರಕಾರ ದಾವಾ ಆಸ್ತಿ ಪ್ರತಿವಾದಿಯ ಹೆಸರಿನಲ್ಲಿ ದಾಖಲಾಗಿದೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ಪ್ರತಿವಾದಿಯೇ ವಹಿವಾಟು ಮಾಡುತ್ತಿದ್ದಾಳೆ ಎಂದರೆ ಸರಿಯಲ್ಲ.

**5.** ಅನಂತ ಹರಿಕಂತ್ರ ಯಾವಾಗ ಮೃತಪಟ್ಟಿದ್ದಾರೆ ಎಂದು ನೆನಪಿಲ್ಲ. ಸುಮಾರು 5-6 ವರ್ಷ ಆಗಿರಬಹುದು. ಅವರು ಮೂಡಂಗಿಯ ನಮ್ಮ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಆತನ ಅಂತ್ಯಸಂಸ್ಕಾರವನ್ನು ನನ್ನ ಮಗ ಮಂಜುನಾಥ ನೆರವೇರಿಸಿರುತ್ತಾನೆ. ಆತನ ಪಿತ್ರಕಾರ್ಯವನ್ನು ನಾವು ಮತ್ತು ಪ್ರತಿವಾದಿ ಸೇರಿ ನೆರವೇರಿಸಿರುತ್ತೇವೆ. ಅನಂತ ಹರಿಕಂತ್ರ ಮೃತಪಟ್ಟ ಬಗ್ಗೆ ಪ್ರತಿವಾದಿ ಪಂಚಾಯತಿಗೆ ಮಾಹಿತಿ ನೀಡಿದ್ದಾರೆ ಎಂದರೆ ಇರಬಹುದು.

**(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ ಕುಮಟಾ